# 'Scientific investigative methods ensure justice to victims'

KOLAR: Scientific investigation would ensure justice to victims of crimes, observed Additional Director General of Police (ADGP) Prathap Reddy.

He was speaking at a training programme Empowering Police Officers Crime Scene and Stress Management for police officers organised by the Department of Forensic Medicine and Technology at Devaraj Urs Medical College.

"Lapses committed by subordinate staff at preliminary stages did not ensure justice to victims in many cases. Careful mahazar and other procedures always helps investigating officer to take the case to local end, besides ensuring justice to victims," he said.

Reddy said:"The police should not be negligent at any cost. They should produce witnesses before the court. Destruction of evidences may end up resulting in punishment to innocent. Such a move is an insult to cops," he said.

Despite deft handling of cases, some case were referred to Central Bureau of Investigation of Criminal Investigation Department. Staff of the two investigative agencies would easily identify witnesses. Such an act should happen at the initial stage, he said.

"Lapses at spot mahazar affects investigation. Taking assistance of forensic science and technology experts always helps investigating team," he said.

Reddy said that many cops faced failures due to stress. They should consult doctors to overcome the stress.

Devaraj Urs Education Society secretary G H Nagaraj said that it was impossible to imagine any society without policemen.

"The government should ensure better facilities for policemen who work under stress. Seniors should consult the government to ensure the required facilities," he said.

SP Karthik Reddy said that the investigating officers should introspect as to why those involved in crime went scot-free.

"Information will be provided to follow methods right from the first of investigation till producing witnesses to the court," he said.

The society treasurer Rajendra, medical college chancellor Dr S Kumar, vice-chancellor Dr G Pradeep Kumar and principal Dr P N Sriramulu were present.

ಸಂಯುಕ್ತ ಕರ್ನಾಟಕ



# ಓಬಿರಾಯನ ತನಿಖೆ ಬಿಡಿ-ಸೈಂಟಿಫಿಕ್ ಆಗಿರಿ

## ಪೊಲೀಸರಿಗೆ ಹೆಚ್ಚುವರಿ ಮಹಾನಿರ್ದೇಶಕ ಪ್ರತಾಪ್‌ರೆಡ್ಡಿ ಸಲಹೆ

ಸಂ.ಕ ಸಮಾಚಾರ, ಕೋಲಾರ

ವೈಜ್ಞಾನಿಕ ತಳಹದಿಯ ಆಧಾರದ ಮೇಲೆ ಅಪರಾಧೀಕರಣದ ತನಿಖೆ ನಡೆದಾಗ ಮಾತ್ರ ನ್ಯಾಯಾಲಯದಲ್ಲಿ ಆರೋಪ ದೃಢಪಟ್ಟು ಅಪರಾಧಿಗೆ ಶಿಕ್ಷೆ ಆಗುತ್ತದೆ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸಿ.ಎಚ್.ಪ್ರತಾಪ್‌ರೆಡ್ಡಿ ಹೇಳಿದರು.

ಮಂಗಳವಾರ ದೇವರಾಜ ಅರಸು ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಜಿಲ್ಲೆಯ ಪೊಲೀಸ್ ಇಲಾಖೆ ಸಿಬ್ಬಂದಿಗೆ ಆಯೋಜಿಸಲಾಗಿದ್ದ ಅಪರಾಧ ನಡೆದ ನಂತರ ಪರಿಸ್ಥಿತಿ ಮತ್ತು ಒತ್ತಡದ ನಿರ್ವಹಣೆ ಕುರಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ ಅಪರಾಧ ನಡೆದ ಸ್ಥಳದ ಪರಿಶೀಲನೆ ಸಮರ್ಪಕವಾಗಿ ಮಾಡುವ ಜತೆಗೆ ಅಗತ್ಯ ಸಾಕ್ಷ್ಯ ಸಂಗ್ರಹಿಸಬೇಕು ಎಂದರು.

ತನಿಖೆ ಹಂತದಲ್ಲಿ ಫೋರೆನ್ಸಿಕ್ ತಜ್ಞರ ನೆರವನ್ನು ಪಡೆದುಕೊಂಡಾಗ ಮೌಲ್ಯಾಧಾರಿತ ತನಿಖೆ ಎನಿಸುತ್ತದೆ. ಅಂತಹ ಸಂದರ್ಭದಲ್ಲಿ ತಜ್ಞರು ನೀಡಿದ ವರದಿಗೆ ವೈಜ್ಞಾನಿಕ ದೃಷ್ಟಿಕೋನ ಇರುವುದರಿಂದ ಅದು 100 ಮಂದಿ ಸಾಕ್ಷಿಗೆ ಸಮವಾಗುತ್ತದೆ. ಅದರಿಂದ ಆರೋಪಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗುವ ಸಾಧ್ಯತೆಯೂ ಇರುತ್ತದೆ ಎಂದು ತಿಳಿಸಿದರು.



ಆರೋಪಿ ನೀಡುವ 161 ನ್ಯಾಯಾಲಯದಲ್ಲಿ ಪೊಲೀಸರು
ಸ್ಟೇಟ್‌ಮೆಂಟ್ ಮೇರೆಗೆ ಸಲ್ಲಿಸುವ ಆರೋಪಪಟ್ಟಿಯಿಂದ

ಪ್ರಯೋಜನವಿಲ್ಲ. ಫೋಟೋ, ವೀಡಿಯೋ,ಪಂಚನಾಮೆ ವರದಿ ನಂತರ ಸಾಕ್ಷಿಗೆ ಮಾನ್ಯತೆ ಸಿಕ್ಕದ ಕಾರಣ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ತನಿಖೆ ಮಾಡಬೇಕೆಂದು ಸೂಚಿಸಿದರು.

ಕೃತ್ಯ ನಡೆದ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದ ಎಂಬಿಬಿಎಸ್ ಡಾಕ್ಟರ್ ಮಾಡುವ ಶವ ಪರೀಕ್ಷೆಗಿಂತ ಫೋರೋನಿಕ್ (ವಿಧಿ ವಿಜ್ಞಾನ) ತಜ್ಞರು ನೀಡುವ ವರದಿ ಹೆಚ್ಚು ಮೌಲ್ಯ ಹೊಂದಿರುತ್ತದೆ. ಇದನ್ನು ಬಿಟ್ಟು ಸಾಂಪ್ರದಾಯಿಕ ತನಿಖೆ ಮಾಡುತ್ತಿರುವುದರಿಂದ ನ್ಯಾಯಾಲಯದಲ್ಲಿ ಶಿಕ್ಷೆ ಪ್ರಮಾಣ ಶೇ.10ಕ್ಕಿಂತ ಕಡಿಮೆ ಆಗಿದೆ ಎಂದು ವಿಷಾದಿಸಿದರು.

ಕೃತ್ಯ ನಡೆದ ಮೂರ್ನಾಲ್ಕು ವರ್ಷದ ನಂತರ ಪ್ರಕರಣ ಸಿಐಡಿಗೆ ವಹಿಸಿದಾಗ ತಜ್ಞರು ಕ್ರೈಂ ಸೀನ್ ಫೋಟೋ ಮತ್ತು ವೀಡಿಯೋ ಅವಲೋಕಿಸಿ ತನಿಖೆ ನಡೆಸಿ ಸಾಕ್ಷಿ ಪತ್ತೆ ಹಚ್ಚಿರುವುದೂ ಉಂಟು. ಆದರೆ ಮೊದಲು ಸ್ಥಳಕ್ಕೆ ಹೋದ ಪೊಲೀಸರಿಗೆ ಈ ಸಾಕ್ಷಿ ಸಿಗುವುದಿಲ್ಲ ಏಕೆ ಎಂದು ಪ್ರಶ್ನಿಸಿದ ಐಜಿಪಿ ಪ್ರತಾಪ್‌ರೆಡ್ಡಿ ಅಪರಾಧ ನಡೆದ ಸ್ಥಳದ ನಿರ್ವಹಣೆಯನ್ನು ಉತ್ತಮವಾಗಿ ಮಾಡಬೇಕೆಂದು ಸಲಹೆ ಮಾಡಿದರು.

ಮೆಡಿಕಲ್ ಕಾಲೇಜು ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿ ಪೊಲೀಸ್ ಇಲಾಖೆಯಲ್ಲಿ ನಿರಪರಾಧಿಗೆ ಶಿಕ್ಷೆ ಆಗದಂತೆ ಎಚ್ಚರಿಕೆ ವಹಿಸಬೇಕಿದ್ದು ತಪ್ಪಿದಲ್ಲಿ ಇಲಾಖೆ ಮೇಲೆ ಸಮಾಜಕ್ಕೆ ಅಪನಂಬಿಕೆ ಬರುತ್ತದೆ ಎಂದು ನುಡಿದರು.

ಮೆಡಿಕಲ್ ಕಾಲೇಜ್ ಕುಲಾಧಿಪತಿ ಡಾ.ಎಸ್.ಕುಮಾರ್ ಮಾತನಾಡಿ ಅಪಘಾತದಂತಹ ತುರ್ತು ಸಂದರ್ಭದಲ್ಲಿ ಪೊಲೀಸರು ರೋಗಿಗಳನ್ನು ಒಂದು ಆಸ್ಪತ್ರೆಯಿಂದ ಮತ್ತೊಂದಕ್ಕೆ ಕೊಂಡೊಯ್ಯುವ ಮೂಲಕ ಅಮೂಲ್ಯ ಸಮಯ ವ್ಯರ್ಥವಾಗುವುದನ್ನು ತಪ್ಪಿಸಲು ಜಿಲ್ಲೆಯ ಎಲ್ಲ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಸೇವೆಯ ವಿವರಗಳನ್ನು ಸಿದ್ಧಪಡಿಸಿ ಇಲಾಖೆಗೆ ಸಲ್ಲಿಸುವ ಯೋಚನೆ ಇದೆ ಎಂದರು.

ಉಪ ಕುಲಪತಿ ಡಾ.ಪ್ರದೀಪ್ ಕುಮಾರ್, ಪ್ರಿನ್ಸಿಪಾಲ್ ಡಾ.ಪಿ.ಎನ್.ಶ್ರೀರಾಮುಲು, ಫೋರೋನಿಕ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಅಭಿನಂದನ್, ಡಾ.ಕುಮಾರಸ್ವಾಮಿ ಉಪಸ್ಥಿತರಿದ್ದರು.

### ಟ್ರಾನ್ಸ್‌ಫರ್ ಸ್ಟ್ರೆಸ್ ತಪ್ಪಿಸಿ

ಮೆಡಿಕಲ್ ಕಾಲೇಜಿನ ನಿರ್ದೇಶಕ ಜಿ.ರಾಜೇಂದ್ರ ಮಾತನಾಡಿ ಪೊಲೀಸರಿಗಾಗಿ ಸರ್ಕಾರಕ್ಕೆ ಸಲ್ಲಿಕೆ ಆಗಿರುವ ಧರ್ಮವೀರ ಆಯೋಗದ ವರದಿ ಜಾರಿ ಆಗುವ ಜತೆಗೆ ಸಮರ್ಪಕ ಪೊಲೀಸ್ ವರ್ಗಾವಣೆ ನೀತಿ ರೂಪಿಸಬೇಕು. ತಪ್ಪಿದಲ್ಲಿ ಪೊಲೀಸ್ ಅಧಿಕಾರಿಗಳು ಜನಪ್ರತಿನಿಧಿಗಳ ಮುಂದೆ ವರ್ಗಾವಣೆ ಮಿನಿಟ್‌ಗಾಗಿ ಕೈಕಟ್ಟಿಕೊಂಡು ನಿಲ್ಲುವ ಜತೆಗೆ ಲಕ್ಷಾಂತರರೂ. ನೀಡುವ ಪರಿಪಾಠ ಮುಂದುವರಿಯುತ್ತದೆ. ಪೊಲೀಸರ ಒತ್ತಡಕ್ಕೆ ಇದೇ ಪ್ರಮುಖ ಕಾರಣ ಎಂದು ವಿಷಾಧಿಸಿದರು.

ಆರೋಪಿಗಳ ಬಾಯಿ ಬಿಡಿಸಲು ಪೊಲೀಸರು ಬ್ರಿಟಿಷರ ಕಾಲದ ಥರ್ಡ್ ಡಿಗ್ರಿ ಟ್ರೀಟ್‌ಮೆಂಟ್ ಬಿಟ್ಟು ಬ್ರೈನ್ ಮ್ಯಾಪಿಂಗ್‌ನಂತಹ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಬೇಕು ಎಂದು ಸಲಹೆ ಮಾಡಿದರು.

> ಸಾಕ್ಷಿ ತಿರುಗಿ ಬೀಳುವುದು, ಕೃತ್ಯ ನಡೆದ ಸ್ಥಳದಲ್ಲಿ ಸಮರ್ಪಕವಾಗಿ ಸಾಕ್ಷ್ಯ ಸಂಗ್ರಹಣೆ ಮಾಡದಿರುವುದು, ತನಿಖಾಧಿಕಾರಿ ವೈಫಲ್ಯ, ನ್ಯಾಯಾಲಯದಲ್ಲಿ ಸಾಕ್ಷಿಗಳನ್ನು ಹಾಜರು ಮಾಡದಿರುವ ಲೋಪಗಳಿಂದಾಗಿ ಶಿಕ್ಷೆ ಪ್ರಮಾಣ ಕುಸಿದಿದೆ. ಕೊಲೆ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿ ಇರುವುದಿಲ್ಲವಾದ್ದರಿಂದಾಗಿ ವೈಜ್ಞಾನಿಕ ಸಾಕ್ಷಿ ಮುಖ್ಯ ಆಗುತ್ತದೆ. ನೊಂದವರಿಗೆ ನ್ಯಾಯ ಒದಗಿಸಬೇಕಾದರೆ ಪೊಲೀಸರಿಗೆ ಒತ್ತಡ ಕಡಿಮೆ ಮಾಡಬೇಕಿದ್ದು ಈ ದೆಸೆಯಲ್ಲಿ ತರಬೇತಿ ಆಯೋಜಿಸಲಾಗಿದೆ.
>
> -ಕಾರ್ತೀಕ್ ರೆಡ್ಡಿ, ಕೋಲಾರ ಎಸ್ಪಿ

# ಸಣ್ಣ ಪ್ರಕರಣವನ್ನೂ ನಿರ್ಲಕ್ಷಿಸಬೇಡಿ

## ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರ ಪಾತ್ರ ಮಹತ್ವದ್ದು: ಎಡಿಜಿಪಿ

**ಕೋಲಾರ:** ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಕೆಲಸವು ಅತ್ಯಂತ ಮಹತ್ವದ್ದಾಗಿದ್ದು ದಾಖಲಾಗುವ ದೂರುಗಳ ಬಗ್ಗೆ ಸೂಕ್ತವಾಗಿ ತನಿಖೆ ನಡೆಸಿ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ಒದಗಿಸಬೇಕು ಎಂದು ಎಡಿಜಿಪಿ ಪ್ರತಾಪ್ ರೆಡ್ಡಿ ತಿಳಿಸಿದರು.

ನಗರದ ಹೊರವಲಯದಲ್ಲಿನ ಡಿ.ದೇವರಾಜ ಅರಸು ಮೆಡಿಕಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಎಂಪವರಿಂಗ್ ಪೊಲೀಸ್ ಫೋರ್ಸ್ ಕ್ರೈಂ ಸಿನ್ ಆ್ಯಂಡ್ ಸ್ಟ್ರೆಸ್ ಮ್ಯಾನೇಜ್‌ಮೆಂಟ್ ಕಾರ್ಯಾಗಾರಕ್ಕೆ ಚಾಲನೆ ಮಾತನಾಡಿದರು.



ಕೋಲಾರ ಡಿ.ದೇವರಾಜ ಅರಸು ಮೆಡಿಕಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಎಂಪವರಿಂಗ್ ಪೊಲೀಸ್ ಫೋರ್ಸ್ ಕ್ರೈಂ ಸಿನ್ ಆ್ಯಂಡ್ ಸ್ಟ್ರೆಸ್ ಮ್ಯಾನೇಜ್‌ಮೆಂಟ್ ಕಾರ್ಯಾಗಾರವನ್ನು ಉದ್ಘಾಟಿಸಿ ಎಡಿಜಿಪಿ ಪ್ರತಾಪ್ ರೆಡ್ಡಿ ಮಾತನಾಡಿದರು.

**ಶಿಕ್ಷೆಕೊಡಿಸಲು ಸೂಕ್ತ ಸಾಕ್ಷಾಧಾರ ಅಗತ್ಯ:** ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು ಮಾಡುವಾಗ ಸ್ಥಳ ಪರಿಶೀಲನೆಯನ್ನೂ ಸೂಕ್ತವಾಗಿ ಮಾಡಬೇಕು. ಸಣ್ಣ ಸಣ್ಣ ಪ್ರಕರಣಗಳೆಂದು ನಿರ್ಲಕ್ಷ್ಯ ವಹಿಸುವುದು ಬೇಡ. ಪ್ರಕರಣವು ಚಿಕ್ಕದಾಗಲಿ ಅಥವಾ ದೊಡ್ಡದಾಗಲಿ ಅದನ್ನು ಪ್ರಾಮಾಣಿಕವಾಗಿ ಬಗೆಹರಿಸಬೇಕು. ಅಪರಾಧಿಗಳಿಗೆ ಶಿಕ್ಷೆಯನ್ನು ಕೊಡಿಸಬೇಕಾದರೆ ಪ್ರತಿಯೊಂದು ಹಂತದಲ್ಲೂ ಜಾಗರೂಕತೆಯಿಂದ ಸಾಕ್ಷಾಧಾರಗಳನ್ನು ಕ್ರೋಢೀಕರಿಸಬೇಕೆಂದು ತಿಳಿಸಿದರು.

**ತನಿಖೆ ವೇಳೆ ಜಾಗರೂಕತೆ ಇರಲಿ:** ಪೊಲೀಸ್ ಇಲಾಖೆಯು ತನಿಖೆ ನಡೆಸಿದ ನಂತರ ಕೆಲವು ಪ್ರಕರಣಗಳು ಸಿಬಿಐಗೆ ಹೋಗುತ್ತವೆ. 3 ಅಥವಾ 4 ವರ್ಷಗಳ ನಂತರ ತನಿಖೆಯನ್ನು ಕೈಗೆತ್ತಿಕೊಳ್ಳುವ ಸಿಬಿಐನವರು ಘಟನೆ ನಡೆದ ಸ್ಥಳದಲ್ಲಿ ಕೆಲವು ದಾಖಲೆಗಳನ್ನು ಕ್ರೋಢೀಕರಿಸುತ್ತಾರೆ. ಆದರೆ, ಇಂತಹ ದಾಖಲೆಗಳು ನಮಗೆ ದೊರೆತಿಲ್ಲವೆಂದರೆ ಏನೆಂದು ಅರ್ಥೈಸಿಕೊಳ್ಳಬೇಕು, ಹಾಗಾಗಿ ಯಾವುದೇ ಪ್ರಕರಣಗಳನ್ನು ತನಿಖೆ ಮಾಡುವಾಗ ಜಾಗರೂಕತೆಯಿಂದ ದಾಖಲೆಗಳನ್ನು ಸಂಪಾದಿಸಬೇಕು ಎಂದು ಹೇಳಿದರು.

**ವೈದ್ಯಕೀಯ ಸಾಕ್ಷಿಗೆ ಹೆಚ್ಚು ಪ್ರಾಮುಖ್ಯತೆ:** ಅಪರಾಧ ಪ್ರಕರಣಗಳಿಗೆ 100 ಮಂದಿಯಿಂದ ಸಾಕ್ಷಿ ಹೇಳಿಸುವುದಕ್ಕಿಂತ ಒಂದು ವೈದ್ಯಕೀಯ ಸಾಕ್ಷಿಯನ್ನು ಕಲ್ಪಿಸಿದರೆ ಅದಕ್ಕೆ ಹೆಚ್ಚು ಪ್ರಾಮುಖ್ಯತೆ ದೊರೆಯುತ್ತದೆ. ಹಾಗಾಗಿ ಕ್ರೈಂ ಪ್ರಕರಣಗಳ ಬಗ್ಗೆ ತನಿಖೆ ನಡೆಸುವಾಗ ವೈದ್ಯಕೀಯ ಇಲಾಖೆಯ ಸಹಕಾರವನ್ನು ಪಡೆದುಕೊಳ್ಳುವುದು ಸೂಕ್ತ. ಅಷ್ಟೇ ಅಲ್ಲದೆ, ಮೃತ ದೇಹವನ್ನು ನುರಿತ ತಜ್ಞ ವೈದ್ಯರಿಂದ ಪೋಸ್ಟ್‌ಮಾರ್ಟಮ್ ಮಾಡಿಸುವ ಮೂಲಕ ಸೂಕ್ತ ಮಾಹಿತಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಹೇಳಿದರು.

**ದಾಖಲೆ ಕ್ರೋಢೀಕರಿಸಿ:** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತೀಕ್‌ರೆಡ್ಡಿ ಮಾತನಾಡಿ, ಕ್ರೈಂನಲ್ಲಿ ಸರಿಯಾದ ರೀತಿ ತನಿಖೆ ಮಾಡಬೇಕು. ಮನುಷ್ಯನ ದೇಹಕ್ಕೆ ಸಂಬಂಧಿಸಿದಂತೆ ಸಾಕಷ್ಟು ವಿಷಯಗಳು ಪೊಲೀಸರಿಗೆ ತಿಳಿದಿರುವುದಿಲ್ಲ, ಹಾಗಾಗಿ ಸಾಕಷ್ಟು ದೂರುಗಳು ಕೋರ್ಟ್‌ನಲ್ಲಿ ಯಶಸ್ವಿಯಾಗುತ್ತಿಲ್ಲ, ಹಾಗಾಗಿ ಕ್ರೈಂ ನಡೆದ ಸ್ಥಳದಲ್ಲಿ ಯಾವ ರೀತಿಯಾಗಿ ವೈದ್ಯಕೀಯ ವಿಷಯಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಕ್ರೋಢೀಕರಿಸಬೇಕು ಎಂಬ ಕುರಿತು ಈ ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

**ಸದ್ಬಳಕೆ ಮಾಡಿಕೊಳ್ಳಿ:** ಯಾವುದೇ ಪ್ರಕರಣಗಳನ್ನು ತನಿಖೆ ಮಾಡಲು ಪೊಲೀಸರ ವೈಯಕ್ತಿಕ ಸಾಮರ್ಥ್ಯವೂ ಮುಖ್ಯವಾಗಿರುತ್ತದೆ. ಹಾಗಾಗಿ ಯಾವ ರೀತಿ ವೈಯಕ್ತಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂಬ ಕುರಿತು ಕಾರ್ಯಾಗಾರದಲ್ಲಿ ತಿಳಿಸಲಾಗುವುದು. ಈ ಸಂಬಂಧ ಎಲ್ಲರೂ ಸಹ ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಡಾ.ಜಿ.ಪ್ರದೀಪ್‌ಕುಮಾರ್, ಜಿ.ಎಚ್. ನಾಗರಾಜ್, ಜಿ.ರಾಜೇಂದ್ರ, ಡಾ.ಶ್ರೀರಾಮುಲು, ಡಾ.ಎಸ್.ಕುಮಾರ್ ಸೇರಿ ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ, ದೇವರಾಜ ಅರಸು ವೈದ್ಯಕೀಯ ಕಾಲೇಜಿನವರು ಉಪಸ್ಥಿತರಿದ್ದರು.

ಕನ್ನಡಪ್ರಭ



# ಅಪರಾಧಿಗೆ ಶಿಕ್ಷೆ ಕೊಡಿಸಲು ಸಾಕ್ಷ್ಯಾಧಾರ ಗಟ್ಟಿ ಇರಬೇಕು

## ಕಾರ್ಯಾಗಾರದಲ್ಲಿ ಎಡಿಜಿಪಿ ಪ್ರತಾಪ್ ರೆಡ್ಡಿ ಕಿವಿಮಾತು




ಕೋಲಾರ ನಗರ ಹೊರವಲಯದಲ್ಲಿನ ಡಿ.ದೇವರಾಜ ಅರಸು ಮೆಡಿಕಲ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕಾರ್ಯಾಗಾರವನ್ನು ಎಡಿಜಿಪಿ ಪ್ರತಾಪ್ ರೆಡ್ಡಿ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಕೋಲಾರ

ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಕೆಲಸವು ಅತ್ಯಂತ ಮಹತ್ವದ್ದಾಗಿದ್ದು ದಾಖಲಾಗುವ ದೂರಗಳ ಬಗ್ಗೆ ಸೂಕ್ತವಾಗಿ ತನಿಖೆ ನಡೆಸಿ ಸಾಕ್ಷಾಧಾರಗಳನ್ನು ನ್ಯಾಯಾಲಯಕ್ಕೆ ಒದಗಿಸಬೇಕು ಎಂದು ಎಡಿಜಿಪಿ ಪ್ರತಾಪ್ ರೆಡ್ಡಿ ಅವರು ತಿಳಿಸಿದರು.

ನಗರ ಹೊರವಲಯದಲ್ಲಿನ ಡಿ.ದೇವರಾಜ ಅರಸು ಮೆಡಿಕಲ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಎಂಪೋರಿಂಗ್ ಪೊಲೀಸ್ ಫೋರ್ಸ್ ಕ್ರೈಂಸಿನ್ ಅಂಡ್ ಸ್ಟ್ರೆಸ್ ಮ್ಯಾನೇಜ್‌ಮೆಂಟ್ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಪ್ರಾಮಾಣಿಕವಾಗಿ ತನಿಖೆ ನಡೆಸಿ:** ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು ಮಾಡುವಾಗ ಸ್ಥಳ ಪರಿಶೀಲನೆಯನ್ನೂ ಸೂಕ್ತವಾಗಿ ಮಾಡಬೇಕು. ಸಣ್ಣಸಣ್ಣ ಪ್ರಕರಣಗಳೆಂದು ನಿರ್ಲಕ್ಷ್ಯ ವಹಿಸುವುದು ಬೇಡ. ಪ್ರಕರಣವು ಚಿಕ್ಕದಾಗಲಿ ಅಥವಾ ದೊಡ್ಡದಾಗಲಿ ಅದನ್ನು ಪ್ರಾಮಾಣಿಕವಾಗಿ ತನಿಖೆ ಮಾಡಬೇಕು. ಅಪರಾಧಿಗಳಿಗೆ ಶಿಕ್ಷೆಯನ್ನು ಕೊಡಿಸಬೇಕಾದರೆ ಪ್ರತಿಯೊಂದು ಹಂತದಲ್ಲೂ ಜಾಗರೂಕತೆಯಿಂದ ಸಾಕ್ಷಾಧಾರಗಳನ್ನು ಕ್ರೋಡೀಕರಿಸಬೇಕೆಂದು ತಿಳಿಸಿದರು.

ಅಪರಾಧ ಪ್ರಕರಣಗಳಿಗೆ 100 ಮಂದಿಯಿಂದ ಸಾಕ್ಷಿ ಹೇಳಿಸುವುದಕ್ಕಿಂತ 1 ವೈದ್ಯಕೀಯ ಸಾಕ್ಷಿಯನ್ನು ಕಲ್ಪಿಸಿದರೆ ಅದಕ್ಕೆ ಹೆಚ್ಚು ಪ್ರಾಮುಖ್ಯತೆ ದೊರೆಯುತ್ತದೆ. ಹಾಗಾಗಿ ಕ್ರೈಂ ಪ್ರಕರಣಗಳ ಬಗ್ಗೆ ತನಿಖೆ ನಡೆಸುವಾಗ ವೈದ್ಯಕೀಯ ಇಲಾಖೆಯ ಸಹಕಾರವನ್ನು ಪಡೆದುಕೊಳ್ಳುವುದು ಸೂಕ್ತ. ಅಷ್ಟೇ ಅಲ್ಲದೆ ಮೃತ ದೇಹವನ್ನು ನುರಿತ ತಜ್ಞ ವೈದ್ಯರಿಂದ ಪೋಸ್ಟ್‌ಮಾರ್ಟಂ ಮಾಡಿಸುವ ಮೂಲಕ ಸೂಕ್ತ ಮಾಹಿತಿಯನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಹೇಳಿದರು.

**ವೈಯಕ್ತಿಕ ಸಾಮರ್ಥ್ಯವೂ ಮುಖ್ಯ:** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾದ ಕಾರ್ತಿಕ್‌ರೆಡ್ಡಿ ಅವರು ಮಾತನಾಡಿ, ಯಾವುದೇ ಪ್ರಕಣಗಳನ್ನು ತನಿಖೆ ಮಾಡಲು ಪೊಲೀಸರ ವೈಯಕ್ತಿಕ ಸಾಮರ್ಥ್ಯವೂ ಮುಖ್ಯವಾಗಿರುತ್ತದೆ. ಹಾಗಾಗಿ ಯಾವ ರೀತಿ ವೈಯಕ್ತಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂಬ ಕುರಿತು ಕಾರ್ಯಾಗಾರದಲ್ಲಿ ತಿಳಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ.ಜಿ. ಪ್ರದೀಪ್ ಕುಮಾರ್, ಜಿ.ಹೆಚ್.ನಾಗರಾಜ್, ಜೆ. ರಾಜೇಂದ್ರ, ಡಾ.ಶ್ರೀರಾಮುಲು, ಡಾ.ಎಸ್.ಕುಮಾರ್ ಸೇರಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಮತ್ತು ದೇವರಾಜ ಅರಸು ವೈದ್ಯಕೀಯ ಕಾಲೇಜಿನವರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ



# ಒತ್ತಡದಿಂದ ಪೊಲೀಸರ ವೃತ್ತಿಯಲ್ಲಿ ವಿಫಲ

## ದೇವರಾಜ ಅರಸ್ ವೈದ್ಯಕೀಯ ಕಾಲೇಜಿನಲ್ಲಿ ಪೊಲೀಸರ ವಿಶೇಷ ಕಾರ್ಯಾಗಾರಕ್ಕೆ ಪ್ರತಾಪ್‌ರೆಡ್ಡಿ ಚಾಲನೆ

■ **ವಿಕ ಸುದ್ದಿಲೋಕ** ಕೋಲಾರ

ಪೊಲೀಸರು ಒತ್ತಡದಲ್ಲಿ ಕೆಲಸ ಮಾಡುವುದರಿಂದ ವೃತ್ತಿಯಲ್ಲಿ ವಿಫಲತೆ ಕಾಣಲಾಗುತ್ತಿದೆ. ಇದರ ನಿರ್ಮೂಲನೆಗೆ ವೈದ್ಯರ ಸಲಹೆ ಪಡೆದು ಕೊಳ್ಳುವುದು ಉತ್ತಮ ಎಂದು ಎಡಿಜಿಪಿ ಪ್ರತಾಪ್‌ರೆಡ್ಡಿ ಸಲಹೆ ನೀಡಿದರು.

ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಪೊಲೀಸ್ ಇಲಾಖೆವತಿಯಿಂದ ಮಂಗಳವಾರ ನಡೆದ ಎಮ್‌ಪವರಿಂಗ್ ಪೊಲೀಸ್ ಆಫೀಸರ್ಸ್-ಕ್ರೈಮ್ ಸೀನ್ ಆ್ಯಂಡ್‌ಸ್ಟ್ರೆಸ್ ಮ್ಯಾನೇಜ್‌ಮೆಂಟ್ ಕುರಿತು ನಡೆದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

**ಪಂಚನಾಮೆ ನೈಜವಾಗಿರಬೇಕು:** ಘಟನೆ ಸ್ಥಳವನ್ನು ಪಂಚನಾಮೆ ಮಾಡುವ ವೇಳೆ ತಪ್ಪು ಮಾಡಿದರೆ ತನಿಖೆ ಸಂದರ್ಭದಲ್ಲಿ ತೊಂದರೆಯಾಗುತ್ತದೆ. ಕ್ಲಿಷ್ಟಕರ ಪ್ರಕರಣಗಳ ತನಿಖೆಗೆ ನ್ಯಾಯ ವಿಜ್ಞಾನ ಮತ್ತು ವಿಷಶಾಸ್ತ್ರ ತಜ್ಞರ ಸಹಾಯ ಪಡೆದುಕೊಂಡರೆ ಪೊಲೀಸರಿಗೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಪ್ರಥಮ ತನಿಖೆಯಲ್ಲಿ ಸಿಬ್ಬಂದಿ ಅಥವಾ ಅಧಿಕಾರಿಗಳು ಲೋಪ ಎಸಗುವುದರಿಂದ ನೊಂದ ವರಿಗೆ ನ್ಯಾಯದೊರಕಿಸಲು ಸಾಧ್ಯವಾಗುತ್ತಿಲ್ಲ, ಎಚ್ಚರಿಕೆಯಿಂದ ಪಂಚನಾಮೆ ಮಾಡಿದರೆ ಪ್ರಕರಣದ ತನಿಖೆ ಸುಲಭವಾಗುತ್ತದೆ ಎಂದರು.

ತನಿಖೆ ವೇಳೆ ಪೊಲೀಸರು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬಾರದು. ಸೂಕ್ತ ಸಾಕ್ಷಿಗಳನ್ನು



ನಗರ ಹೊರವಲಯದ ದೇವರಾಜ ಅರಸ್ ವೈದ್ಯಕೀಯ ಕಾಲೇಜಿನಲ್ಲಿ ಮಂಗಳವಾರ ನಡೆದ ಎಂಪವರ್ ಪೊಲೀಸ್ ಆಫೀಸರ್ಸ್ ಕ್ರೈಮ್ ಸೀನ್ ಅಂಡ್ ಸ್ಟ್ರೆಸ್ ಮ್ಯಾನೇಜ್‌ಮೆಂಟ್ ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಎಡಿಜಿಪಿ ಪ್ರತಾಪ್‌ರೆಡ್ಡಿ ಮಾತನಾಡಿದರು.

ನ್ಯಾಯಾಲಯಕ್ಕೆ ಹಾಜರುಪಡಿಸಬೇಕು.ಪಂಚನಾಮೆ ವರದಿ ಸಲ್ಲಿಕೆ ಆಧಾರದ ಮೇಲೆ ನ್ಯಾಯಾಲಯ ವರದಿಗಳನ್ನು ಕೇಳುತ್ತದೆ. ಸಾಕ್ಷಿಗಳನ್ನು ನಾಶಮಾಡಲು ಯತ್ನಿಸಿದರೆ ನಿರಪರಾಧಿಗೆ ಶಿಕ್ಷೆಯಾಗುತ್ತದೆ. ಇದು ತಮ್ಮ ವೃತ್ತಿಗೌರವಕ್ಕೂ ಧಕ್ಕೆ ಉಂಟು ಮಾಡುತ್ತದೆ ಎಂದು ಎಚ್ಚರಿಕೆ ನೀಡಿದರು.

ಪೊಲೀಸ್ ಅಧಿಕಾರಿಗಳು ಸಮರ್ಪಕವಾಗಿ ತನಿಖೆ ನಡೆಸಿದ್ದರೂ ಹಲವು ಪ್ರಕರಣಗಳು ಉನ್ನತ ತನಿಖೆಗಾಗಿ ಸಿಬಿಐ, ಸಿಐಡಿಗೆ ಹೋಗುತ್ತವೆ.ಅವರು ಮೂರುನಾಲ್ಕು ವರ್ಷ ನಂತರ ಘಟನೆ ಸ್ಥಳಕ್ಕೆ ಭೇಟಿ ನೀಡಿದರೂ ಸಾಕ್ಷಿಗಳನ್ನು ಪತ್ತೆ ಹಚ್ಚುತ್ತಾರೆ. ಈ ಕೆಲಸ ಪೊಲೀಸರ ತನಿಖೆ ಹಂತ ದಲ್ಲಿ ನಡೆಯಬೇಕು ಎಂದು ಹೇಳಿದರು.

ಪೊಲೀಸ್ ಅಧಿಕಾರಿಗಳು ಯಾವುದೇ ಪ್ರಕರಣವನ್ನು ನೂತನ ತಂತ್ರಜ್ಞಾನದಿಂದ ತನಿಖೆ ನಡೆಸಿದಾಗ ನೊಂದವರಿಗೆ ನ್ಯಾಯದೊರಕಿಸಲು ಸಾಧ್ಯ ಎಂದು ತಿಳಿಸಿದರು.

**ದೋಷಾರೋಪಣ ಪಟ್ಟಿ ಸಿದ್ಧಪಡಿಸಿ:** 161 ಕಾಯಿದೆಯಡಿ ದೋಷಾರೋಪಣ ಪಟ್ಟಿ ಸಲ್ಲಿಸಿದರೆ ನಮ್ಮ ಕೆಲಸ ಸುಲಭವಾಗುತ್ತದೆ, ನ್ಯಾಯಾಲಯಕ್ಕೆ ಹೊರೆಯಾಗುತ್ತದೆ. ಆದರೆ, ಯಾವುದೇ ಪ್ರಯೋಜನವಿಲ್ಲ, ಹೀಗಾಗಿ 161ಗೆ ಮೊರೆ ಹೋಗದೆ ಬೇರೆ ತಂತ್ರಜ್ಞಾನದಿಂದ ದೋಷಾರೋಪಣ ಪಟ್ಟಿ ಸಿದ್ಧಪಡಿಸಿ, ಸಲ್ಲಿಸಿ ಎಂದು ಸೂಚಿಸಿದರು.ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತೀಕ್ ರೆಡ್ಡಿ ಮಾತನಾಡಿ,ಯಾವುದೇ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಅಪರಾಧಿಗೆ ಶಿಕ್ಷೆಯಾಗ ದಿರಲು ಕಾರಣವೇನು ಎಂಬುದನ್ನು ಪೊಲೀಸರು ಅವಲೋಕನ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಘಟನೆ ಪ್ರಥಮ ತನಿಖೆಯಿಂದ ಹಿಡಿದು ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ತನಕ ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ ತರಬೇತಿಯಲ್ಲಿ ಮಾಹಿತಿ ನೀಡಲಾಗುವುದು. ಪ್ರತಿಯೊಬ್ಬರು ಇದರ ಪ್ರಯೋಜನ ಪಡೆದು ಕೊಳ್ಳಬೇಕು ಎಂದು ಕೋರಿದರು.

ಪೊಲೀಸ್ ಇಲಾಖೆಯಲ್ಲಿ ಸಮತೋಲನ ಎನ್ನುವುದು ಅತಿ ಮುಖ್ಯವಾಗಿ ಬೇಕಾಗುತ್ತದೆ. ನೊಂದವರಿಗೆ ನ್ಯಾಯ ದೊರಕಿಸಿಕೊಡಬೇಕಾದರೆ ಅದನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದ ಅವರು, ಕಾರ್ಯಾಗಾರದಲ್ಲಿ ಕಾಟಾಚಾರಕ್ಕೆ ಭಾಗವಹಿಸದೆ ಶ್ರದ್ಧೆಯಿಂದ ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್. ನಾಗರಾಜ್, ವೈದ್ಯಕೀಯ ಕಾಲೇಜಿನ ಕುಲಪತಿ ಡಾ.ಎಸ್.ಕುಮಾರ್, ಖಜಾಂಚಿ ರಾಜೇಂದ್ರ, ಸಂಸ್ಥೆಯ ಕುಲಾಧಿಪತಿ ಡಾ.ಜಿ. ಪ್ರದೀಪ್ ಕುಮಾರ್, ಪ್ರಾಂಶುಪಾಲ ಡಾ.ಪಿ.ಎನ್. ಶ್ರೀರಾಮುಲು ಹಾಜರಿದ್ದರು.



ಕೋಲಾರ-ಕೆಜಿಎಫ್ ಜಿಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ವಿಜಯವಾಣಿ



## ಕಾರ್ಯಾಗಾರದಲ್ಲಿ ಪೊಲೀಸ್ ಸಿಬ್ಬಂದಿಗೆ ಎಡಿಜಿಪಿ ಪ್ರತಾಪ್ ರೆಡ್ಡಿ ಸೂಚನೆ

# ತನಿಖೆ ಹಂತದಲ್ಲೇ ಸಾಕ್ಷಿ ಪತ್ತೆಹಚ್ಚಿ

■ ವಿಜಯವಾಣಿ ಸುದ್ದಿಜಾಲ ಕೋಲಾರ

ಅಪರಾಧ ನಡೆದು ಕೆಲ ವರ್ಷ ಕಳೆದಿದ್ದರೂ ಸಿಬಿಐ, ಸಿಐಡಿ ಅಧಿಕಾರಿಗಳಿಗೆ ಸಾಕ್ಷಿ ಪತ್ತೆಹಚ್ಚಲು ಸಾಧ್ಯವಾಗುವುದಾದರೆ ಆ ಕೆಲಸ ಪೊಲೀಸ್ ತನಿಖೆ ಹಂತದಲ್ಲೇ ನಡೆಯಬೇಕು ಎಂದು ಎಡಿಜಿಪಿ ಪ್ರತಾಪ್ ರೆಡ್ಡಿ ಹೇಳಿದರು.

ಟಮಕದ ಶ್ರೀ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಪೊಲೀಸ್ ಇಲಾಖೆಯಿಂದ ಮಂಗಳವಾರ ಪೊಲೀಸ್ ಸಿಬ್ಬಂದಿಗೆ ಅಪರಾಧ ನಡೆದ ಸ್ಥಳದ ನಿರ್ವಹಣೆ ಮತ್ತು ಕೆಲಸ ಒತ್ತಡ ನಿರ್ವಹಣೆ ಸಂಬಂಧ ಆಯೋಜಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಗಳು ಪ್ರಥಮ ತನಿಖೆಯಲ್ಲಿ ಲೋಪ ಎಸಗಿದರೆ ಅಂತಹ ಪ್ರಕರಣದಲ್ಲಿ ನೊಂದವರಿಗೆ ನ್ಯಾಯದೊರಕಿಸಲು ಸಾಧ್ಯವಾಗದು. ಹೀಗಾಗಿ ಪಂಚನಾಮೆ ಸಮರ್ಪಕವಾಗಿ ನಡೆದರೆ ಪ್ರಕರಣದ ತನಿಖೆಯೂ ಸುಲಭವಾಗುತ್ತದೆ ಎಂದರು.

» ತಂತ್ರಜ್ಞಾನದ ನೆರವು ಪಡೆದು ಪ್ರಕರಣ ಭೇದಿಸಿ

ಕೆಲ ಗಂಭೀರ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳು ಸಮರ್ಪಕವಾಗಿ ತನಿಖೆ ನಡೆಸಿದ್ದರೂ ಉನ್ನತ ತನಿಖೆಗಾಗಿ ಸಿಬಿಐ, ಸಿಐಡಿಗೆ ಹೋಗುತ್ತದೆ. ತನಿಖಾ ಸಂಸ್ಥೆಗಳ ಅಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಮೂರ್ನಾಲ್ಕು ವರ್ಷಗಳ ನಂತರ ಭೇಟಿ ನೀಡಿದರೂ ಸಾಕ್ಷ್ಯ ಪತ್ತೆ ಹಚ್ಚುತ್ತಾರೆ. ಈ ಕೆಲಸ ಪೊಲೀಸರ ತನಿಖೆ ಹಂತದಲ್ಲಿ ನಡೆಯುವಂತಾಗಬೇಕು. ಆ ನಿಟ್ಟಿನಲ್ಲಿ ಅಧಿಕಾರಿಗಳು ತಂತ್ರಜ್ಞಾನದ ನೆರವು ಪಡೆದು ಪ್ರಕರಣ ಭೇದಿಸಬೇಕೆಂದು ಸಲಹೆ ನೀಡಿದರು.

ಘಟನೆಸ್ಥಳದಮಹಜರುನಡೆಸುವಲ್ಲಿಎಡವಿದರೆ ತನಿಖೆ ಸಂದರ್ಭದಲ್ಲಿ ತೊಂದರೆಯಾಗುತ್ತದೆ. ಕ್ಲಿಷ್ಟ ಪ್ರಕರಣ ತನಿಖೆಗೆ ವಿಧಿವಿಜ್ಞಾನ ಮತ್ತು ವಿಷಶಾಸ್ತ್ರ ತಜ್ಞರ ಸಹಾಯ ಪಡೆಯುವುದು ತನಿಖಾ ದೃಷ್ಟಿಯಿಂದ ಸೂಕ್ತ. ಅಪರಾಧ ಪ್ರಕರಣಗಳ ತನಿಖೆ ವೇಳೆ ಪೊಲೀಸರು ನಿರ್ಲಕ್ಷ ತೋರಬಾರದು. ಸರಿಯಾದ ಸಾಕ್ಷ್ಯಗಳೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು. ಪಂಚನಾಮೆ ವರದಿ ಸಲ್ಲಿಕೆಯ ಆಧಾರದ ಮೇಲೆ ನ್ಯಾಯಾಲಯ ವರದಿ ಕೇಳುತ್ತದೆ. ಸಾಕ್ಷಿ ನಾಶಮಾಡಲು ಯತ್ನಿಸಿದರೆ ನಿರಪರಾಧಿಗೆ ಶಿಕ್ಷೆಯಾಗುತ್ತದೆ. ಇದು ವೃತ್ತಿಗೌರವಕ್ಕೂ ಧಕ್ಕೆ ಉಂಟು ಮಾಡುತ್ತದೆ ಎಂದು ಎಚ್ಚರಿಕೆ ನೀಡಿದರು.

ದೇವರಾಜ ಅರಸು ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ವೈದ್ಯಕೀಯ ಕಾಲೇಜಿನ ಕುಲಪತಿ ಡಾ.ಎಸ್.ಕುಮಾರ್, ಖಜಾಂಚಿ ರಾಜೇಂದ್ರ, ಸಂಸ್ಥೆಯ ಕುಲಾಧಿಪತಿ ಡಾ.ಜಿ.ಪ್ರದೀಪ್ ಕುಮಾರ್, ಪ್ರಾಂಶುಪಾಲ ಡಾ.ಪಿ.ಎನ್. ಶ್ರೀರಾಮುಲು ಹಾಜರಿದ್ದರು.



ವಿಜಯವಾಣಿ ಚಿತ್ರ

ಕೋಲಾರದ ಶ್ರೀ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಾಗಾರವನ್ನು ಎಡಿಜಿಪಿ ಪ್ರತಾಪ್ ರೆಡ್ಡಿ ಉದ್ಘಾಟಿಸಿದರು. ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಎಸ್ಪಿ ಕಾರ್ತಿಕ್ ರೆಡ್ಡಿ, ಕುಲಪತಿ ಎಸ್.ಕುಮಾರ್ ಇತರರು ಉಪಸ್ಥಿತರಿದ್ದರು.

ಯಾವುದೇ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಅಪರಾಧಿಗೆ ಶಿಕ್ಷೆಯಾಗದಿರಲು ಕಾರಣವೇನು ಎಂಬುದನ್ನು ಪೊಲೀಸರು ಆತ್ಮಾವಲೋಕನ ಮಾಡಿಕೊಳ್ಳಬೇಕು. ತರಬೇತಿ ಪ್ರಯೋಜನ ಪಡೆದು ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಬೇಕು.

| ಕಾರ್ತಿಕ್ ರೆಡ್ಡಿ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ





ಕೋಲಾರದಲ್ಲಿ ಪೊಲೀಸ್ ಇಲಾಖೆವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಎಂಪವರಿಂಗ್ ಪೊಲೀಸ್ ಆಫೀಸರ್ಸ್ ಕ್ರೈಮ್ ಸೀನ್ ಅಂಡ್ ಸ್ಟೈಸ್ ಮ್ಯಾನೇಜ್‌ಮೆಂಟ್ ಕುರಿತು ನಡೆದ ತರಬೇತಿಯಲ್ಲಿ ಬೆಂಗಳೂರಿನ ಎಡಿಜಿಪಿ ಪ್ರತಾಪ್ ರೆಡ್ಡಿ ಮಾತನಾಡಿದರು (ಎಡಚಿತ್ರ). ಪೊಲೀಸ್ ಅಧಿಕಾರಿಗಳು ಪಾಲ್ಗೊಂಡಿದ್ದರು

### ಕ್ರೈಮ್ ಸೀನ್ ಅಂಡ್ ಸ್ಟೈಸ್ ಮ್ಯಾನೇಜ್‌ಮೆಂಟ್ ತರಬೇತಿಯಲ್ಲಿ ಬೆಂಗಳೂರಿನ ಎಡಿಜಿಪಿ ಪ್ರತಾಪ್ ರೆಡ್ಡಿ ಅಭಿಪ್ರಾಯ

# ಸಾಕ್ಷಿ ನಾಶದಿಂದ ವೃತ್ತಿಗೌರವಕ್ಕೆ ಧಕ್ಕೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಪಂಚನಾಮ ವರದಿ ಸಮರ್ಪಕವಾಗಿರಬೇಕು
- ವೈಜ್ಞಾನಿಕ ತನಿಖೆಯಿಂದ ಅಪರಾಧಿಗೆ ಶಿಕ್ಷೆ
- ತನಿಖೆಗೆ ವೈದ್ಯರ ಸಹಕಾರ ಅಗತ್ಯ

ಕೋಲಾರ: 'ಪೊಲೀಸ್ ಅಧಿಕಾರಿಗಳು ಯಾವುದೇ ಪ್ರಕರಣವನ್ನು ವೈಜ್ಞಾನಿಕವಾಗಿ ತನಿಖೆ ನಡೆಸಿದಾಗ ನೊಂದವರಿಗೆ ನ್ಯಾಯದೊರಕಿಸಲು ಸಾಧ್ಯ' ಎಂದು ಬೆಂಗಳೂರಿನ ಎಡಿಜಿಪಿ ಪ್ರತಾಪ್ ರೆಡ್ಡಿ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಪೊಲೀಸ್ ಇಲಾಖೆ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಎಂಪವರಿಂಗ್ ಪೊಲೀಸ್ ಆಫೀಸರ್ಸ್- ಕ್ರೈಮ್ ಸೀನ್ ಅಂಡ್ ಸ್ಟೈಸ್ ಮ್ಯಾನೇಜ್‌ಮೆಂಟ್ ಕುರಿತು ನಡೆದ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದರು.

'ಬಹುತೇಕ ಪ್ರಕರಣಗಳಲ್ಲಿ ಪ್ರಥಮ ತನಿಖೆಯಲ್ಲಿ ಸಿಬ್ಬಂದಿ ಅಥವಾ ಅಧಿಕಾರಿಗಳು ಲೋಪ ಎಸಗುವುದರಿಂದ ನೊಂದವರಿಗೆ ನ್ಯಾಯದೊರಕಿಸಲು ಸಾಧ್ಯವಾಗಿಲ್ಲ. ಎಚ್ಚರಿಕೆಯಿಂದ ಪಂಚನಾಮ ಮಾಡಿದರೆ ಪ್ರಕರಣದ ತನಿಖೆಯೂ ಸುಲಭವಾಗುತ್ತದೆ' ಎಂದರು.

'ತನಿಖೆ ವೇಳೆ ಪೊಲೀಸರು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬಾರದು. ಸರಿಯಾದ ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು.

> ಪೊಲೀಸ್ ಅಧಿಕಾರಿಗಳು ಕೆಲ ಪ್ರಕರಣಗಳ ತನಿಖೆ ವೇಳೆ ವೈದ್ಯರ ಸಲಹೆ ಪಡೆದುಕೊಂಡಾಗ ಆರೋಪಿಗಳಿಗೆ ಶಿಕ್ಷೆ ಕೊಡಿಸಬಹುದು. ಪಂಚನಾಮ ವರದಿಯನ್ನು ಸಮರ್ಪಕವಾಗಿ ತಯಾರಿಸಿದಾಗ ತನಿಖೆ ನಡೆಸಲು ಸಹಕಾರಿಯಾಗುತ್ತದೆ.
>
> -ಪ್ರತಾಪ್ ರೆಡ್ಡಿ, ಎಡಿಜಿಪಿ

ಪಂಚನಾಮ ವರದಿ ಸಲ್ಲಿಕೆಯ ಆಧಾರದ ಮೇಲೆ ನ್ಯಾಯಾಲಯ ವರದಿ ಕೇಳುತ್ತದೆ. ಸಾಕ್ಷಿಗಳನ್ನು ನಾಶಮಾಡಲು ಯತ್ನಿಸಿದರೆ ನಿರಾಪರಾಧಿಗೆ ಶಿಕ್ಷೆಯಾಗುತ್ತದೆ. ಇದು ತಮ್ಮ ವೃತ್ತಿಗೌರವಕ್ಕೂ ಧಕ್ಕೆ ಉಂಟು ಮಾಡುತ್ತದೆ' ಎಂದು ಎಚ್ಚರಿಸಿದರು.

'ಪೊಲೀಸ್ ಅಧಿಕಾರಿಗಳು ಸಮರ್ಪಕವಾಗಿ ತನಿಖೆ ನಡೆಸಿದ್ದರೂ ಹಲವು ಪ್ರಕರಣಗಳು ಉನ್ನತ ತನಿಖೆಗಾಗಿ ಸಿಬಿಐ, ಸಿಐಡಿಗೆ ಹೋಗುತ್ತವೆ. ಅವರು ಮೂರುನಾಲ್ಕು ವರ್ಷಗಳ ನಂತರ ಘಟನೆ ಸ್ಥಳಕ್ಕೆ ಭೇಟಿ ನೀಡಿದರೂ ಸಾಕ್ಷಿಗಳನ್ನು ಪತ್ತೆ ಹಚ್ಚುತ್ತಾರೆ. ಈ ಕೆಲಸ ಪೊಲೀಸರ ತನಿಖೆ ಹಂತದಲ್ಲಿ ನಡೆಯಬೇಕು' ಎಂದು ಹೇಳಿದರು.

'ಘಟನೆ ಸ್ಥಳವನ್ನು ಪಂಚನಾಮ ಮಾಡುವ ವೇಳೆ ತಪ್ಪು ಮಾಡಿದರೆ ತನಿಖೆ ಸಂದರ್ಭದಲ್ಲಿ ತೊಂದರೆಯಾಗುತ್ತದೆ. ಕ್ಲಿಷ್ಟಕರ ಪ್ರಕರಣಗಳ ತನಿಖೆಗೆ ನ್ಯಾಯ ವಿಜ್ಞಾನ ಮತ್ತು ತಜ್ಞರ (ಫರೋನಿಕ್ಸ್ ಸೈನ್ಸ್ ಅಂಡ್ ಟೆಕ್ನಾಲಜಿ ಎಕ್ಸ್‌ಪೋರ್ಟ್ಸ್) ಸಹಾಯ ಪಡೆದುಕೊಂಡರೆ ಪೊಲೀಸರಿಗೆ ಅನುಕೂಲವಾಗುತ್ತದೆ' ಎಂದು ಸಲಹೆ ನೀಡಿದರು.

'ಪೊಲೀಸರು ಒತ್ತಡದಲ್ಲಿ ಕೆಲಸ ಮಾಡುವುದರಿಂದ ವೃತ್ತಿಯಲ್ಲಿ ವಿಫಲತೆ ಕಾಣಲಾಗುತ್ತಿದೆ. ಇದರ ನಿರ್ಮೂಲನೆಗೆ ವೈದ್ಯರ ಸಲಹೆ ಪಡೆದುಕೊಳ್ಳುವುದು ಉತ್ತಮ' ಎಂದು ಹೇಳಿದರು.

ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ಮಾತನಾಡಿ, 'ಸಮಾಜದಲ್ಲಿ ಪೊಲೀಸ್ ಕೆಲಸ ಮಹತ್ವವಾದುದು, ಪೊಲೀಸ್ ವ್ಯವಸ್ಥೆ ಇಲ್ಲದಿದ್ದರೆ ಸಮಾಜ ಏನಾಗುತ್ತಿತ್ತು ಎಂದು ಊಹಿಸಲಾಗುತ್ತಿರಲಿಲ್ಲ' ಎಂದರು.

'ಪೊಲೀಸರು ಒತ್ತಡದಿಂದ ಇಚ್ಛೆ ಬಂದು ಕೆಲಸ ಮಾಡಲು ಸರ್ಕಾರ ಅಗತ್ಯ ಸೌಕರ್ಯಗಳನ್ನು ಕಲ್ಪಿಸಬೇಕು. ಈ ಬಗ್ಗೆ ಹಿರಿಯ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರಬೇಕು' ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಮಾತನಾಡಿ, 'ಯಾವುದೇ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಅಪರಾಧಿಗೆ ಶಿಕ್ಷೆಯಾಗದಿರಲು ಕಾರಣ ಏನು ಎಂಬುದನ್ನು ಪೊಲೀಸರು ಅವಲೋಕನ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

'ಘಟನೆಯ ಪ್ರಥಮ ತನಿಖೆಯಿಂದ ಹಿಡಿದು ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ತನಕ ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ ತರಬೇತಿಯಲ್ಲಿ ಮಾಹಿತಿ ನೀಡಲಾಗುವುದು. ಪ್ರತಿಯೊಬ್ಬರು ಇದರ ಪ್ರಯೋಜನ ಪಡೆದುಕೊಳ್ಳಬೇಕು' ಎಂದು ಕೋರಿದರು.

ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಖಜಾಂಚಿ ರಾಜೇಂದ್ರ, ವೈದ್ಯಕೀಯ ಕಾಲೇಜಿನ ಕುಲಪತಿ ಡಾ.ಎಸ್. ಕುಮಾರ್, ಉಪ ಕುಲಪತಿ ಡಾ.ಜಿ. ಪ್ರದೀಪ್ ಕುಮಾರ್, ಪ್ರಾಂಶುಪಾಲ ಡಾ.ಪಿ.ಎನ್.ಶ್ರೀರಾಮುಲು ಹಾಜರಿದ್ದರು.

ಕೋಲಾರ ಪತ್ರಿಕೆ



### ದೇವರಾಜ ಅರಸ್ ಕಾಲೇಜಿನಲ್ಲಿ ಒಂದು ದಿನದ ಕಾರ್ಯಾಗಾರ

# ದೂರುಗಳ ಕುರಿತು ಸೂಕ್ತ ತನಿಖೆ ನಡೆಸಿ ಸಾಕ್ಷ್ಯಾಧಾರ ಸಂಗ್ರಹಿಸಿ: ಪ್ರತಾಪ್‌ರೆಡ್ಡಿ





ಕೋಲಾರ ಜೂ ೧೮

ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಕೆಲಸ ಅತಿ ಮಹತ್ವದ್ದು. ದಾಖಲಾಗುವ ದೂರುಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ಒದಗಿಸಬೇಕು ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಪ್ರತಾಪ್‌ರೆಡ್ಡಿ ಅವರು ತಿಳಿಸಿದರು.

ನಗರದ ಹೊರವಲಯದ ದೇವರಾಜ ಅರಸು ಮೆಡಿಕಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಅಪರಾಧ ನಡೆದ ಸ್ಥಳ ಮತ್ತು ಒತ್ತಡ ನಿರ್ವಹಣೆ ಕುರಿತು ಪೊಲೀಸರಿಗೆ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಅಪರಾಧ ಪ್ರಕರಣಗಳಿಗೆ ಸಂಬಂಧಿಸಿ ತನಿಖೆ ಮಾಡುವಾಗ ಸ್ಥಳ ಪರಿಶೀಲನೆ ಸೂಕ್ತವಾಗಿ ಮಾಡಬೇಕು. ಸಣ್ಣ ಸಣ್ಣ ಪ್ರಕರಣಗಳೆಂದು ನಿರ್ಲಕ್ಷ್ಯ ಮಾಡುವುದು ಬೇಡ. ಪ್ರಕರಣ ಚಿಕ್ಕದಾಗಲಿ ಅಥವಾ ದೊಡ್ಡದಾಗಲಿ ಅದನ್ನು ಪ್ರಾಮಾಣಿಕವಾಗಿ ಮಾಡಬೇಕು. ಅಪರಾಧಿಗಳಿಗೆ ಶಿಕ್ಷೆಯನ್ನು ಕೊಡಿಸಬೇಕಾದರೆ ಪ್ರತಿ ಹಂತದಲ್ಲೂ ಜಾಗರೂಕತೆಯಿಂದ ಸಾಕ್ಷ್ಯಾಧಾರ ಕಲೆಹಾಕಬಹುದೆಂದು ನುಡಿದರು.

ಪೊಲೀಸ್ ಇಲಾಖೆ ತನಿಖೆ ನಡೆಸಿದ ನಂತರ ಕೆಲವು ಪ್ರಕರಣಗಳು ಸಿ.ಬಿ.ಐ ಗೆ ಹೋಗುತ್ತವೆ. ೩ ಅಥವಾ ೪ ವರ್ಷಗಳ ಬಳಿಕ ತನಿಖೆ ಕೈಗೆತ್ತಿಕೊಳ್ಳುವ ಸಿಬಿಐನವರು ಘಟನೆ ನಡೆದ ಸ್ಥಳದಲ್ಲಿ ಕೆಲವು ದಾಖಲೆಗಳನ್ನು ಕ್ರೋಢೀಕರಿಸುತ್ತಾರೆ. ಇಂತಹ ದಾಖಲೆಗಳು ನಮಗೆ ದೊರೆತಿಲ್ಲವೆಂದರೆ ಏನೆಂದು ಅರ್ಥೈಸಿಕೊಳ್ಳಬೇಕು? ಹಾಗಾಗಿ ಯಾವುದೇ ಪ್ರಕರಣ ತನಿಖೆ ಮಾಡುವಾಗ ಜಾಗರೂಕತೆಯಿಂದ ದಾಖಲೆಗಳನ್ನು ಸಂಪಾದಿಸಬೇಕು ಎಂದರು.

ಅಪರಾಧ ಪ್ರಕರಣಗಳಿಗೆ ೧೦೦ ಮಂದಿಯಿಂದ ಸಾಕ್ಷಿ ಹೇಳಿಸುವುದಕ್ಕಿಂತ ಒಬ್ಬ ವೈದ್ಯಕೀಯ ಸಾಕ್ಷಿಯನ್ನು ಕಲ್ಪಿಸಿದರೆ ಅದಕ್ಕೆ ಹೆಚ್ಚು ಪ್ರಾಮುಖ್ಯತೆ ದೊರೆಯುತ್ತದೆ. ಹಾಗಾಗಿ ವೈದ್ಯಕೀಯ ಇಲಾಖೆಯ ಸಹಕಾರ ಪಡೆದುಕೊಳ್ಳುವುದು ಸೂಕ್ತ. ಅಲ್ಲದೆ ಮೃತ ದೇಹವನ್ನು ನುರಿತ ವೈದ್ಯರಿಂದ ಪರೀಕ್ಷೆ ಮಾಡಿಸುವ ಮೂಲಕ ಸೂಕ್ತ ಮಾಹಿತಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಬೇಕೆಂದರು.

ಜಿಲ್ಲಾ ರಕ್ಷಣಾಧಿಕಾರಿ ಕಾರ್ತೀಕ್‌ರೆಡ್ಡಿ ಮಾತನಾಡಿ, ಸರಿಯಾದ ರೀತಿ ತನಿಖೆ ಮಾಡಬೇಕು. ಮನುಷ್ಯನ ದೇಹಕ್ಕೆ ಸಂಬಂಧಿಸಿ ಸಾಕಷ್ಟು ವಿಷಯ ಪೊಲೀಸರಿಗೆ ತಿಳಿದಿರುವುದಿಲ್ಲ. ಹಾಗಾಗಿ ಸಾಕಷ್ಟು ದೂರುಗಳು ಕೋರ್ಟ್‌ನಲ್ಲಿ ಸಫಲವಾಗುತ್ತಿಲ್ಲ.ಹಾಗಾಗಿ ಅಪರಾಧ ನಡೆದ ಸ್ಥಳದಲ್ಲಿ ಯಾವ ರೀತಿ ಕಾರ್ಯನಿರ್ವಹಿಸಬೇಕೆಂದು ತಿಳಿಸಲಾಗುತ್ತಿದೆಯೆಂದರು.

ಜಿ. ಪ್ರದೀಪ್ ಕುಮಾರ್, ಡಾ॥ಎಸ್.ಕುಮಾರ್, ಜಿ.ಎಚ್. ನಾಗ ರಾಜ್, ಜೆ.ರಾಜೇಂದ್ರ, ಡಾ॥ ಶ್ರೀರಾಮುಲು ಸೇರಿ ಅನೇಕ ಮಂದಿ ಹಾಜರಿದ್ದರು.